ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ
ದಿನಾಂಕ : DATE : 4/6/2020

vishwavani.news

ಬುಡಕಟ್ಟು ಸಂಶೋಧನಾ ಸಂಸ್ಥೆ ವರದಿಯೇ ಮೂಲ ಆಧಾರ | ತಿಂಗಳಾನುಗಟ್ಟಲೆ ಕ್ಷೇತ್ರ ಅಧ್ಯಯನ ನಡೆಸಿ ವರದಿ ತಯಾರಿಕೆ

# ಪರಿವಾರ-ತಳವಾರರಿಗೆ ಎಸ್ಟಿ ಪ್ರಮಾಣಪತ್ರ

ವಿ. ವಾ 4/6/20

**ಕೆ.ಬಿ.ರಮೇಶನಾಯಕ** ಮೈಸೂರು



ಕಳೆದ ಮೂರು ದಶಕಗಳಿಂದಲೂ ನನೆಗುದಿಗೆ ಬಿದ್ದಿದ್ದ ಪರಿವಾರ-ತಳವಾರ ಸಮುದಾಯಗಳನ್ನ ಪ. ಪಂಗಡಕ್ಕೆ (ಎಸ್‌ಟಿ) ಸೇರಿಸಿ ಕೇಂದ್ರ ಸರಕಾರ ಲೋಕಸಭೆಯಲ್ಲಿ ಮಸೂದೆ ಪಾಸು ಮಾಡಿದ ಎರಡು ತಿಂಗಳ ಬಳಿಕ ಎಸ್ಟಿ ಪ್ರಮಾಣತ್ರ ನೀಡಲು ರಾಜ್ಯಸರಕಾರ ಆದೇಶ ನೀಡಿದ್ದು,ಇದರಿಂದಾಗಿ ನಾನಾ ತೊಡಕು, ಸಮಸ್ಯೆಗೆ ಸಿಲುಕಿದ್ದ ಇವೆರಡು ಸಮುದಾಯ ನಿಟ್ಟುಸಿರುಬಿಟ್ಟಿದೆ.



ಈ ಎರಡು ಸಮುದಾಯಗಳು ಪ. ಪಂಗಡದ ಪರ್ಯಾಯ ಪದಗಳೆಂದು ಪರಿಗಣಿಸುವಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ತಯಾರಿಸಿ ಸಲ್ಲಿಸಿದ್ದ ವರದಿಯೇ ಮೂಲ ಆಧಾರವಾಗಿದೆ. ಇದರ ಜತೆಗೆ ರಾಜ್ಯದ ಸಿದ್ದಿ ಸಮುದಾಯವೂ ಎಸ್ಟಿಗೆ ಸೇರ್ಪಡೆಯ ಹಿಂದೆ ಇದೇ ಸಂಸ್ಥೆಯು ತಯಾರು ಮಾಡಿ ಸಲ್ಲಿಸಿದ್ದ ವರದಿಯನ್ನೇ ಕೇಂದ್ರ ಸರಕಾರ ಯಥಾವತ್ತಾಗಿ ಪರಿಗಣಿಸಿರುವುದರಿಂದ ಸಂಸ್ಥೆಗೆ ರಾಷ್ಟಮಟ್ಟದಲ್ಲಿ ಗರಿಮೆ ಸಿಕ್ಕಿದಂತಾಗಿದೆ.

ಪರಿವಾರ-ತಳವಾರ ಪದಗಳನ್ನು ಎಸ್ಟಿಗೆ ಸೇರಿಸಲು ಆಯಾಯ ಸರಕಾರ, ಸಮಾಜದ ನಾಯಕರು, ಚುನಾಯಿತ ಜನಪ್ರತಿನಿಧಿಗಳು ತಮ್ಮ ತಮ್ಮ ಹಂತದಲ್ಲಿ ಹೋರಾಟ ಮಾಡಿದ್ದರೂ ತಾಂತ್ರಿಕ-ನಿಖರ ಮಾಹಿತಿಯುಳ್ಳ ವರದಿಯೇ ದೊಡ್ಡ ಪ್ಲಸ್ ಪಾಯಿಂಟ್ ಆಗಿದ್ದು ಗಮನಾರ್ಹವಾಗಿದೆ. ಹಳೆಯ ಮೈಸೂರು ಪ್ರಾಂತ್ಯದಲ್ಲಿ ನಾಯಕ ಸಮುದಾಯದ ಪರ್ಯಾಯ ಪದಗಳಾಗಿದ್ದ ತಳವಾರ-ಪರಿವಾರ ಎಸ್ಟಿಗೆ ಸೇರದೆ ಮೀಸಲಿನಿಂದ ವಂಚಿತರಾಗುವ ಜತೆಗೆ ಹಲವಾರು ಸಮಸ್ಯೆಗಳನ್ನ ಎದುರಿಸುವಂತಾಗಿತ್ತು. ಇವೆರಡು ನಾಯಕ ಸಮುದಾಯದ ಪರ್ಯಾಯ ಪದಗಳೆಂದು ಹೇಳಿ ಎಸ್ಟಿಗೆ ಸೇರಿಸುವಂತೆ ಕಳೆದ ಮೂರು ದಶಕಗಳಿಂದ ನಡೆಸಿಕೊಂಡು ಬಂದ ಹೋರಾಟದ ಫಲವಾಗಿ ರಾಜ್ಯಸರಕಾರ ಕರ್ನಾಟಕ ವಿಶ್ವವಿದ್ಯಾಲಲಯಕ್ಕೆ ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಪತ್ರದೊಡನೆ 2014ರಲ್ಲಿ ರಾಜ್ಯಸರಕಾರಕ್ಕೆ ಸಲ್ಲಿಸಿತ್ತು.

ಬಳಿಕ ರಾಜ್ಯಸಚಿವ ಸಂಪುಟ ಸಭೆಯಲ್ಲಿ ಇವೆರಡು ಸಮುದಾಯಗಳನ್ನ ಎಸ್ಟಿ ಅಂತ ಪರಿಗಣಿಸುವಂತೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯಕ್ಕೆ ಶಿಫಾರಸು ಮಾಡಲಾಗಿತ್ತು. ಈ ಶಿಫಾರರಸ್ಸಿನ ವರದಿಯನ್ನ [illegible]ಲಿಸಿದ ರಿಜಿಸ್ಟ್ರಾರ್ ಜನರಲ್ ಆಫ್ [illegible]ಯಾ ಕೆಲವು ಪೂರಕ ಮಾಹಿತಿಕೇಳಿ ಹಿಂತಿರುಗಿಸಿತ್ತು. ಬಳಿಕ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ವತಿಯಿಂದ ಮತ್ತೊಮ್ಮೆ ಆಳವಾದ ಅಧ್ಯಯನ ಹಾಗೂ ಹಿಂದಿನ ಸಂಶೋಧಕರು ಕೈಗೊಂಡ ಕುಲಶಾಸ್ತ್ರೀಯ ಅಧ್ಯಯನ ಅವಲೋಕಿಸಿ ಸರಕಾರಿ ದಾಖಲೆ ಒಳಗೊಂಡಂತೆ ಮತ್ತೊಮ್ಮೆ ರಾಜ್ಯಸರಕಾರಕ್ಕೆ ಸಮರ್ಥನಾ ವರದಿ ಸಲ್ಲಿಸಿತ್ತು. ನಂತರ, 2017ರಲ್ಲಿ ಕೇಂದ್ರಸರಕಾರಕ್ಕೆ ಪುನಃ ವರದಿ ಸಲ್ಲಿಸಿದ್ದನ್ನು ಪರಿಗಣಿಸಿದ ಕೇಂದ್ರಸರಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರಾಜ್ಯಸರಕಾರ ಶಿಫಾರಸ್ಸನ್ನು ಅಂಗೀಕರಿಸಬಹುದೆಂದು ಸಮ್ಮತಿಸಿದ್ದರು.

**ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದ ಪ್ರತಾಪಸಿಂಹ:** ಹಲವಾರು ವರ್ಷದಿಂದ ನೆನಗುದಿಗೆ ಬಿದ್ದಿದ್ದ ಈ ವಿಚಾರವನ್ನ ಕೈಗೆತ್ತಿಕೊಂಡ ಸಂಸದ ಪ್ರತಾಪಸಿಂಹ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಜತೆಗೆ ಆಶಯ ಈಡೇರುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕಳೆದ 2018ರಲ್ಲಿ ಕೇಂದ್ರ ಸಂಪುಟ ಸಭೆಯಲ್ಲಿ, ಪರಿವಾರ-ತಳವಾರ ಎಸ್ಟಿ ಸಮುದಾಯದ ಪರ್ಯಾಯ ಪದವೆಂದು ಪರಿಗಣಿಸಿ ನಿರ್ಣಯಿಸಿತ್ತು. ನಂತರ ಸಂಸದರು ರಾಜ್ಯ ಸಭೆಯಲ್ಲಿ ಮಸೂದೆ ಮಂಡಿಸುವ ಜತೆಗೆ ಲೋಕಸಭೆ ಅಧಿವೇಶನದಲ್ಲೂ ಮಸೂದೆ ಅಂಗೀಕರಿಸುವಂತೆ ನೋಡಿಕೊಂಡಿದ್ದರು. ಕೇಂದ್ರ ಸಚಿವರಾದ ಪ್ರಹ್ಲಾದ್‌ಜೋಷಿ, ಡಿ.ವಿ.ಸದಾನಂದಗೌಡ, ಅರ್ಜುನ್ ಮುಂಡಾ, ತಾವರ್‌ಚಂದ್ ಗೆಹ್ಲೋಟ್ ಸೇರಿ ಇನ್ನಿತರ ಸಚಿವರ ನಿವಾಸಕ್ಕೆ ಎಡತಾಕಿ ಎರಡು ಸದನದಲ್ಲಿ ಪಾಸಾಗುವಂತೆ ಮಾಡಿದಲ್ಲದೆ ಕಳೆದ ಮಾರ್ಚ್‌ನಲ್ಲಿ ರಾಷ್ಟಪತಿಗಳ ಅಂಗೀಕಾರದೊಡನೆ ಕೇಂದ್ರಸರಕಾರ ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಮಾಡಲಾಗಿತ್ತು.

**ಜಾತಿ ಪ್ರಮಾಣ ಪತ್ರ ಕೊಡಲು ಅಸ್ತು:** ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಿದ್ದರಿಂದ ರಾಜ್ಯಸರಕಾರ ಈಗ ಪರಿಶಿಷ್ಟಪಂಗಡದ ಪಟ್ಟಿಯಲ್ಲಿನ ಕ್ರಮಸಂಖ್ಯೆ 38ರಲ್ಲಿರುವ ಸಮುದಾಯಗಳ ಜತೆ ಪರಿವಾರ-ತಳವಾರ ಸಮುದಾಯ ಸೇರಿಎಸ್ಟಿ ಜಾತಿ ಪ್ರಮಾಣ ಪತ್ರ ನೀಡುವಂತೆ ನೋಟಿಫಿಕೇಷನ್ ಹೊರಡಿಸಿದೆ.

ಇದರಂದಾಗಿ ಇನ್ನು ಮುಂದೆ ರಾಜ್ಯದಲ್ಲಿ ಪರಿವಾರ-ತಳವಾರ ಅಂಥ ನಮೂದಿಸಿದ್ದವರು ಎಸ್ಟಿ ಮೀಸಲು ಪಡೆಯಲು ದಾರಿಯಾಗಿದೆ. ಈ ಮೊದಲುತಳವಾರ-ಪರಿವಾರ ಎಸ್ಟಿಗೆ ಸೇರದೆ ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸಿಲುಕಿದ್ದರಿಂದ ಅನೇಕರು ಪ್ರಮಾಣಪತ್ರ ಮಾಡಿಸುವ ಗೋಜಿಗೆ ಹೋಗಿರಲಿಲ್ಲ. ಕೆಲವರು ಶಾಲಾ ದಾಖಲಾತಿ, ಕೋರ್ಟ್ ಅಫಿಡವಿಟ್ ಆಧಾರದಲ್ಲಿ ಎಸ್ಟಿಮಾಡಿಸಿದ್ದರೂ ಕಾನೂನಾತ್ಮಕ ಸಮಸ್ಯೆಗೆ ಸಿಲುಕುವಂತಾಗಿತ್ತು. ಆದರೆ, ರಾಜ್ಯಸರಕಾರ ಅಧಿಕೃತವಾಗಿ ನೋಟಿಫಿಕೇಷನ್ ಹೊರಡಿಸುವ ಮೂಲಕ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

---



ನಾನು ಮೊದಲ ಬಾರಿಗೆ ಚುನಾಯಿತನಾದ ಬಳಿಕ ನಾಯಕ ಸಮುದಾಯದ ಬೇಡಿಕೆಯಾಗಿದ್ದ ತಳವಾರ-ಪರಿವಾರವನ್ನ ಎಸ್ಟಿಗೆ ಸೇರಿಸಿ ಕೊಡುವ ಮಾತನ್ನು ಕೊಟ್ಟಿದ್ದೆ. ಅದರಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ಬಿಲ್ ಪಾಸಾಗುವಂತೆ ನೋಡಿಕೊಂಡಿದ್ದೆ.ಅದೇ ರೀತಿ ಸಿಎಂ ಬಿಎಸ್‌ವೈ ಅವರಿಗೆ ಮನವಿ ಮಾಡಿದ ಮೇಲೆ ಅಧಿಕೃತವಾಗಿ ನೋಟಿಫಿಕೇಷನ್ ಹೊರಡಿಸಿದ್ದು, ಎರಡನೇ ಅವಧಿಯ ಮೊದಲ ವರ್ಷದ ದೊಡ್ಡ ಸಾಧನೆಯಾಗಿದೆ.

**- ಪ್ರತಾಪ್‌ಸಿಂಹ** ಸಂಸದ



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಗೆ ವಹಿಸಿದ್ದ ತಳವಾರ, ಪರಿವಾರ ಮತ್ತು ಸಿದ್ಧಿ ಜನಾಂಗದ ಬಗ್ಗೆ ಸಂಶೋಧಕರು ಆಳವಾದ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಿ ರಾಜ್ಯ ಸರಕಾರಕ್ಕೆ ಸಲ್ಲಿಸಿತ್ತು. ಈ ವರದಿಯ ಆಧಾರದ ಮೇಲೆ ಕೇಂದ್ರ ಸರಕಾರ ಪರಿಗಣಿಸಿ ಎಸ್ಟಿಗೆ ಸೇರಿಸಲು ಕಾರಣವಾಯ್ತು. ಈ ವಿಚಾರ ಸಂಸ್ಥೆಗೆ ದೊಡ್ಡ ಹೆಮ್ಮೆ-ಸಾಧನೆಯಾಗಿದೆ. ಸಿದ್ಧಿ ಜನಾಂಗದ ಕುರಿತು ಕೊಟ್ಟಿದ್ದ ವರದಿಯನ್ನ ಯಥಾವತ್ತಾಗಿ ಪರಿಗಣಿಸಿದ್ದು ಸಂತಸವಾಗಿದೆ.

**- ಡಾ.ಟಿ.ಟಿ.ಬಸವನಗೌಡ**

ನಿರ್ದೇಶಕ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ